ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ
ನ್ಯಾಯಾಲಯ,ಮಂಡ್ಯ,(ಆಸೀನ ಶ್ರೀರಂಗಪಟ್ಟಣ)

ಸತ್ರ ಪ್ರಕರಣ ಸಂಖ್ಯೆ: 5048/2022

ಪ್ರಾ ಸಾ 13 ಚಾ ಸಾ15

ಹೆಸರು: ರಮೇಶ್

ತಂದೆಯ ಹೆಸರು: ಲೇಟ್ ಕರೀಗೌಡ

ವಯಸ್ಸು: 54 ವರ್ಷ

ಉದ್ಯೋಗ: ಗ್ರಾಮಲೆಕ್ಕಿಗರು, ಹುಲಿಕೆರೆ.

ವಾಸ: ಶ್ರೀರಂಗಪಟ್ಟಣ.

ಸಾಕ್ಷಿಯನ್ನು ದಿ: 06.01.2024 ರಂದು ಸಾಕ್ಷಿಯನ್ನು ಕರೆಸಿ
ಪ್ರಮಾಣ ವಚನ ಬೋಧಿಸಲಾಯ್ತು.

ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:-

1.ಸಾಕ್ಷಿ.14-ಉಮೇಶ್ ನನಗೆ ಗೊತ್ತು, ಅವರು ಕಂದಾಯ ನಿರೀಕ್ಷಕರಾಗಿ ಕೆಲಸ ಮಾಡುತ್ತಿದ್ದಾರೆ.

2. ದಿ: 8.2.2022 ರಂದು ಹುಲಿಕೆರೆಯ ಗ್ರಾಮಲೆಕ್ಕಿಗರ ಕಚೇರಿಯಲ್ಲಿ ನಾನು ಇದ್ದಾಗ ಬೆಳಗ್ಗೆ 10ಗಂಟೆಗೆ ನನಗೆ ನಮ್ಮ ತಹಶೀಲ್ದಾರರು ಫೋನ್ ಮಾಡಿ ಕೆ ಆರ್ ಸಾಗರ ಠಾಣೆಗೆ ಕೊಲೆ ಕೇಸಿಗೆ ಸಂಬಂಧಪಟ್ಟಂತೆ ತನಿಖೆಗೆ

ಸಹಕರಿಸಲು ಹೋಗಬೇಕು ಎಂದು ತಿಳಿಸಿದರು. ಆ ಸಂದರ್ಭದಲ್ಲಿ ನನಗೆ ಕೆ ಆರ್ ಸಾಗರದ ಪೊಲೀಸ್ ನಿರೀಕ್ಷಕರೂ ಕೂಡ ಠಾಣೆಗೆ ಬರುವಂತೆ ಪೋನ್ ಮೂಲಕ ತಿಳಿಸಿದರು.

3. ಆ ರೀತಿ ಸೂಚನೆ ಬಂದ ನಂತರದಲ್ಲಿ ಬೆಳಗ್ಗೆ 10.40 ಗಂಟೆಗೆ ನಾನು ಮತ್ತು ಕಂದಾಯ ನಿರೀಕ್ಷಕರಾದ ಉಮೇಶ್‌ರವರು ಕೆ ಆರ್ ಸಾಗರ ಪೊಲೀಸ್‌ಠಾಣೆಗೆ ಹೋಗಿರುತ್ತೇವೆ.

4. ಆ ರೀತಿ ನಾನು ಮತ್ತು ಉಮೇಶ್ ರವರು ಕೆ ಆರ್ ಸಾಗರ ಠಾಣೆಗೆ ಹೋದಾಗ ಅಲ್ಲಿ ಡಿವೈಎಸ್‌ಪಿ ಮತ್ತು ಆರೋಪಿ ಲಕ್ಷ್ಮಿ ಇದ್ದರು. ಸದರಿ ಲಕ್ಷ್ಮಿಯನ್ನು ನಮಗೆ ತೋರಿಸಿ ಕೆ ಆರ್ ಸಾಗರದ ಬಜಾರ್ ಲೈನ್ ನಲ್ಲಿ ಲಕ್ಷ್ಮಿ ಮತ್ತು ಆಕೆಯ ಮೂರು ಜನ ಮಕ್ಕಳು ಹಾಗೂ ಗೋವಿಂದ ಎಂಬ ಹುಡುಗನನ್ನು ಈಕೆ ಕೊಲೆ ಮಾಡಿದ್ದಾಳೆ ಎಂದು ನಮಗೆ ಪೊಲಿಸರು ತಿಳಿಸಿದ್ದಾರೆ.

5. ಆ ಸಂದರ್ಭದಲ್ಲಿ ಆರೋಪಿಯ ವಶದಲ್ಲಿ ಒಂದು ಸ್ಯಾಮ್ ಸಂಗ್ ಕಂಪನಿಯ ಮೊಬೈಲ್ ಮತ್ತು ಇನ್ನೊಂದು ಲಾವಾ ಕಂಪನಿಯ ಮೊಬೈಲ್ ಇತ್ತು. ಆ

ಮೊಬೈಲುಗಳ ಪೈಕಿ ಸ್ಯಾಮ್ ಸಂಗ್ ಕಂಪನಿಯ ಕೀ ಪ್ಯಾಡ್ ಮೊಬೈಲ್ ನಲ್ಲಿ ಸಿಮ್ ಇತ್ತು. ಆದರೆ ಲಾವಾ ಕಂಪನಿಯ ಕೀ ಪ್ಯಾಡ್ ಮೊಬೈಲ್‌ನಲ್ಲಿ ಸಿಮ್ ಇರಲಿಲ್ಲ.ಅದನ್ನು ಪೊಲೀಸರು ಅಮಾನತ್ತು ಪಡಿಸಿಕೊಂಡು ಪಂಚನಾಮೆಯನ್ನು ಮಾಡಿ ನನ್ನ ರುಜು ಪಡೆದುಕೊಂಡಿದ್ದಾರೆ .ಸದರಿ ಪಂಚನಾಮೆಯನ್ನು ಈಗ ನೋಡಿದೆ. ಅದರಲ್ಲಿ ನನ್ನ ರುಜು ಇದೆ. ಸಾಕ್ಷಿ ಗುರುತಿಸಿದ ದಾಖಲೆಯನ್ನು ನಿಪಿ 15 ಮತ್ತು ಸಾಕ್ಷಿಯ ರುಜುವನ್ನು ನಿಪಿ 15ಎ ಎಂದು ಗುರುತಿಸಲಾಯಿತು.

6. ಆ ರೀತಿ ಅಮಾನತ್ತು ಪಡಿಸಿಕೊಂಡ ಸ್ಯಾಮ್ ಸಂಗ್ ಕಂಪನಿಯ ಮೊಬೈಲನ್ನು ನೋಡಿದರೆ ಗುರುತಿಸುತ್ತೇನೆ. (ಸದರಿ ಮೊಬೈಲನ್ನು ಈ ತನಕ ಪೊಲೀಸರು ಹಾಜರುಪಡಿಸಿಲ್ಲ.) ಪೊಲೀಸರು ಅಮಾನತ್ತು ಪಡಿಸಿಕೊಂಡ ಲಾವಾ ಕಂಪನಿಯ ಮೊಬೈಲನ್ನು ಈಗ ನೋಡಿದೆ. ಸದರಿ ಮೊಬೈಲನ್ನು ಮು.ಮಾ 18 ಎಂದು ಗುರುತಿಸಲಾಯಿತು.

7.ಸದರಿ ಮೊಬೈಲುಗಳನ್ನು ಅಮಾನತ್ತು ಪಡಿಸಿಕೊಳ್ಳುವ ಸಂದರ್ಭದಲ್ಲಿ ಎರಡು ಪೊಟೋಗಳನ್ನು ನಿಪಿ 16ರಂತೆ ತೆಗೆದಿದ್ದಾರೆ . ಸದರಿ ಪೊಟೋದಲ್ಲಿ ಕಿತ್ತಳೆ ಬಣ್ಣದ ಸೀರೆ ತೊಟ್ಟಿರುವ ಹೆಂಗಸು ಆರೋಪಿ ಲಕ್ಷ್ಮಿಯಾಗಿದ್ದಾಳೆ.

8.ಆನಂತರ ಆರೋಪಿ ನಮ್ಮನ್ನು ಬೆಳವತ್ತ ಗ್ರಾಮದ ಸಾರ್ವಜನಿಕ ಸ್ಮಶಾನಕ್ಕೆ ಹೋಗುವ ರಸ್ತೆಯಲ್ಲಿ ಅಡ್ಡಲಾಗಿ ಹರಿಯುವ ವರುಣಾ ಕಾಲುವೆಯ ಬಳಿ ಕರೆದುಕೊಂಡು ಹೋಗಿ ಕೊಲೆ ಮಾಡಿದ ಸಂದರ್ಭದಲ್ಲಿ ತಾನು ಧರಿಸಿದ್ದ ಬಟ್ಟೆಗಳನ್ನು ಹಾಗೂ ಕೃತ್ಯಕ್ಕೆ ಬಳಸಿದ್ದ ಸುತ್ತಿಗೆಯನ್ನು ಬಿಸಾಡಿರುವ ಸ್ಥಳ ಎಂದು ತೋರಿಸಿದ ಮೇರೆಗೆ ಸ್ಥಳಕ್ಕೆ ಈಜುಗಾರರನ್ನು ಪೊಲೀಸರು ಸ್ಥಳಕ್ಕೆ ಬರಮಾಾಡಿಕೊಂಡು ಸದರಿ ಈಜುಗಾರರು ನಾಲೆಗೆ ಇಳಿದು ಅಲ್ಲಿ ಸ್ಥಳದಲ್ಲಿದ್ದ ಒಂದು ಸುತ್ತಿಗೆಯನ್ನು ಮತ್ತು ನಾಲೆಯಲ್ಲಿದ್ದ ಸಿಮೆಂಟ್ ಬಣ್ಣದ ಸೀರೆ, ಕೇಸರಿ ಬಣ್ಣದ ರವಿಕೆ, ಪಿಂಕ್ ಬಣ್ಣದ ಒಳಲಂಗ ಮತ್ತು ಒಂದು  ವಿವಿಧ ಬಣ್ಣಗಳಿಂದ ಕೂಡಿದ ವೇಲ್ ಅನ್ನು ತೆಗೆದು ಹಾಜರುಪಡಿಸಿದ್ದನ್ನು ಪೊಲೀಸರು ಅಮಾನತ್ತುಪಡಿಸಿಕೊಂಡು ಮಹಜರು ಬರೆದಿದ್ದಾರೆ. ಆ ಮಹಜರಿಗೆ ನಾನು ರುಜು ಮಾಡಿದ್ದೇನೆ. ಸದರಿ ಮಹಜರನ್ನು ಈಗ ನೋಡಿದೆ. ಅದರಲ್ಲಿ ನನ್ನ ರುಜು ಇದೆ. ಸಾಕ್ಷಿ ಗುರುತಿಸಿದ ಮಹಜರನ್ನು  ನಿಪಿ 17 ಮತ್ತು ಸಾಕ್ಷಿಯ ರುಜುವನ್ನು ನಿಪಿ.17ಎ ಎಂದು ಗುರುತಿಸಲಾಯಿತು.

9. ಆ ರೀತಿ ಸ್ಥಳದಲ್ಲಿ ಅಮಾನತ್ತು ಪಡಿಸಿಕೊಂಡ

ಸುತ್ತಿಗೆ, ಸಿಮೆಂಟ್ ಬಣ್ಣದ ಸೀರೆ, ಕೇಸರಿ ಬಣ್ಣದ ರವಿಕೆ, ಪಿಂಕ್ ಬಣ್ಣದ ಒಳಲಂಗ ಮತ್ತು ಒಂದು ವಿವಿಧ ಬಣ್ಣಗಳಿಂದ ಕೂಡಿದ ವೇಲ್ ಅನ್ನು ಈಗ ನೋಡಿದೆ. ಸದರಿ ಸುತ್ತಿಗೆಯನ್ನು ಎಂ ಒ 19 ಮತ್ತು ಬಟ್ಟೆಗಳನ್ನು ಅನುಕ್ರಮವಾಗಿ ನಿಪಿ 20 ರಿಂದ 23 ಎಂದು ಗುರುತಿಸಲಾಯಿತು. ಸದರಿ ನಾಲ್ಕು ಬಟ್ಟೆಗಳು ಒದ್ದೆಯಾಗಿದ್ದವು.

10. ಸದರಿ ಸುತ್ತಿಗೆ ಮತ್ತು 4 ಬಟ್ಟೆಗಳನ್ನು ಅಮಾನತ್ತು ಪಡಿಸಿಕೊಂಡಾಗ 10 ಫೋಟೋಗಳನ್ನು ನಿಪಿ 18 ರಂತೆ ತೆಗೆದಿರುತ್ತಾರೆ.

11.ಅದಾದ ನಂತರದಲ್ಲಿ ಆರೋಪಿಯು ನಮ್ಮನ್ನು ಬೆಳವತ್ತ ಗ್ರಾಮದಲ್ಲಿರುವ ಸನ್ ರೈಸ್ ಚಿಕನ್ ಅಂಗಡಿಗೆ ಕರೆದುಕೊಂಡು ಹೋಗಿ ತಾನು ಕೃತ್ಯಕ್ಕೆ ಬಳಸಿದ್ದ ಮಚ್ಚನ್ನು ಸದರಿ ಚಿಕನ್ ಅಂಗಡಿಯಿಂದ ಮೊದಲು ಪಡೆದು ಕೃತ್ಯದ ನಂತರ ಅಲ್ಲಿಗೆ ವಾಪಸ್ ಕೊಟ್ಟಿರುವುದಾಗಿ ತಿಳಿಸಿದ ನಂತರ ಅಂಗಡಿಯಲ್ಲಿದ್ದ ಅಂಗಡಿಯ ಮಾಲೀಕರು ಲಕ್ಷ್ಮಿಯನ್ನು ಗುರುತಿಸಿ ಮಚ್ಚನ್ನು ಹಾಜರುಪಡಿಸಿದಾಗ ಸದರಿ ಮಚ್ಚನ್ನು ಪೊಲೀಸರು ನಿಪಿ 12 ಪಂಚನಾಮೆ ಮೂಲಕ ಅಮಾನತ್ತು

ಪಡಿಸಿಕೊಂಡು ನನ್ನ ರುಜುವನ್ನು ನಿಪಿ 12 ಬಿ ರಂತೆ ಪಡೆದುಕೊಂಡಿದ್ದಾರೆ.ಆ ಸಂದರ್ಭದಲ್ಲಿ ಎರಡು ಪೊಟೋಗಳನ್ನು ನಿಪಿ 13 ರಂತೆ ತೆಗೆದಿರುತ್ತಾರೆ.

12. ನಿಪಿ 12 ಪಂಚನಾಮೆಯ ಮೂಲಕ ಅಮಾನತ್ತು ಪಡಿಸಿಕೊಂಡ ಮಚ್ಚು ಈಗ ನ್ಯಾಯಾಲಯದ ಮುಂದೆ ಇರುವ ಮು.ಮಾ. 16ರ ಮಚ್ಚು ಆಗಿದೆ.

ಮುಂದುವರೆದ ಮುಖ್ಯ ವಿಚಾರಣೆ ಮುಂದೂಡಿದೆ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ.

ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ (ಆಸೀನ ಶ್ರೀರಂಗಪಟ್ಟಣ)